ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ಶಿವಮೊಗ್ಗ ಜಿಲ್ಲೆಯ ಹೊಸ ಜಿಲ್ಲಾ ರಕ್ಷಣಾಧಿಕಾರಿಗಳು ಅಧಿಕಾರ ವಹಿಸಿಕೊಂಡ ನಂತರ (ಅಂದರೆ ದಿನಾಂಕ : 9-7-98 ರಿಂದ 18-3-99 ರವರೆಗೆ 37 ಕೊಲೆ ಪ್ರಕರಣಗಳು ವರದಿಯಾಗಿರುತ್ತದೆ.

ಆ) ವರದಿಯಾಗಿರುವ 37 ಪ್ರಕರಣಗಳಲ್ಲಿ 34 ಪ್ರಕರಣಗಳು ಪತ್ತೆಯಾಗಿದ್ದು ಒಟ್ಟು 101 ಜನ ಆರೋಪಿಗಳನ್ನು ಬಂಧಿಸಲಾಗಿದೆ.

ಇ) ಸಾಮಾನ್ಯವಾಗಿ ಕೊಲೆಯ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಆದರೂ ಜಮೀನು ವ್ಯಾಜ್ಯ, ಹಳ್ಳಿಗಳಲ್ಲಿ ಗುಂಪುಗಾರಿಕೆ ಇಂಥಹ ಸಂದರ್ಭಗಳಲ್ಲಿ ಪ್ರತಿಬಂಧಿತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಬಾರ್ ಮತ್ತು ರೆಸ್ಟೋರೆಂಟ್, ಮದ್ಯದಂಗಡಿಗಳು ಇಂಥವುಗಳ ಮೇಲೆ ಗಮನವಿರಿಸಿದ್ದು ಯಾವುದೇ ಗಲಭೆಯಾದಾಗ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ಗಲಭೆ ದೊಂಬಿ ಮುಂತಾದವುಗಳಲ್ಲಿ ತೀವ್ರ ಕ್ರಮ ಜರುಗಿಸಿ ಆರೋಪಿಗಳನ್ನು ಬಂಧಿಸಿ ಮುಂದೆ ಇವು ಬೆಳೆದು ದೊಡ್ಡದಾಗದಂತೆ ಹತ್ತಿಕ್ಕಲಾಗುತ್ತಿದೆ.

ಈ) ಶಿವಮೊಗ್ಗ ಜಿಲ್ಲೆಯಲ್ಲಿ ಮಟ್ಕಾ ಜೂಜಾಟ ಹಾಗೂ ಇತರ ಅವ್ಯವಹಾರಗಳನ್ನು ನಿಯಂತ್ರಣಗೊಳಿಸಲು ಅಪರಾಧ ಜಾಗ್ರತಾ ದಳವನ್ನು ರಚಿಸಿದೆ. ಅವು ಇಂತಹ ಸ್ಥಳಗಳ ಮೇಲೆ ದಾಳಿ ನಡೆಸಿ ಕ್ರಮ ಜರುಗಿಸುತ್ತವೆ.

ನೂತನವಾಗಿ ಜಿಲ್ಲಾ ರಕ್ಷಣಾಧಿಕಾರಿಗಳು ಜಿಲ್ಲೆಯ ಪ್ರಭಾರ ವಹಿಸಿಕೊಂಡ ನಂತರ ಅಂದರೆ 9-7-98 ರಿಂದ 18-3-98 ರ ವರೆಗೆ ಒಟ್ಟು 85 ಮಟ್ಕಾ ಜೂಜಾಟದ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. 43 ಇತರೆ ಜೂಜಾಟದ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ. ಮದ್ಯವನ್ನು ಅಕ್ರಮವಾಗಿ ಸಂಗ್ರಹಿಸಿದ 60 ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ. ಹಾಗೂ ಸೂಳೆಗಾರಿಕೆಯನ್ನು ನಡೆಸುತ್ತಿದ್ದ 13 ಕೇಂದ್ರಗಳ ಮೇಲೆ ದಾಳಿ ನಡೆಸಿ ಕ್ರಮ ಕೈಗೊಳ್ಳಲಾಗಿದೆ.

ದಿನಗೂಲಿ ನೌಕರರು.

956(1035) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರಕಾರದ ದಿನಗೂಲಿ ನೌಕರರ ಮಹಾಮಂಡಳಿಯು ಗೌರವಧನ ಹಾಗೂ ದಿನಗೂಲಿ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ದಿನಾಂಕ :22-3-99 ರಿಂದ ಅನಿರ್ದಿಷ್ಟ ಅವಧಿಯ ವಿಧಾನಸೌಧ ಮುತ್ತಿಗೆ ಕರೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ ದಿನಗೂಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಕೈಕೊಂಡ ಕ್ರಮಗಳೇನು?

ಶ್ರೀ ಜಿ.ಪರಮೇಶ್ವರ್ (ಮುಖ್ಯ ಮಂತ್ರಿಗಳು) :—

ಅ) ಹೌದು

ಆ) ದಿನಗೂಲಿ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರವು ಪರಿಶೀಲಿಸಿ, ಸ್ವೀಕಾರಾರ್ಹ ಬೇಡಿಕೆಗಳ ಕುರಿತು ಈಗಾಗಲೇ ಸೂಕ್ತ ಕ್ರಮ ಕೈಗೊಂಡಿದೆ. ಕೆಲವು ಬೇಡಿಕೆಗಳು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ಪರಿಶೀಲನೆಯಲ್ಲಿವೆ.

ಬೀದರ್ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಲಾಗಿರುವ ಐ.ಪಿ. ಸೆಟ್ಟುಗಳು.

957(1354) ಶ್ರೀ ಗುರುಪಾದಪ್ಪ ಸಂಗನಬಸಪ್ಪ ನಾಗಮಾರಪಲ್ಲಿ (ಔರಾದ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ವಿದ್ಯುದ್ದೀಕರಣ ಮಾಡಲಾಗಿರುವ ಐ.ಪಿ. ಸೆಟ್‌ಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಅಂಕಿಅಂಶಗಳನ್ನು ಒದಗಿಸುವುದು)

ಆ) ಈ ಐ.ಪಿ. ಸೆಟ್‌ಗಳಿಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುವ ವ್ಯವಸ್ಥೆಯನ್ನು ಎಂದು ಕೈಗೊಳ್ಳಲಾಯಿತು? ಹಾಗೂ ಈ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ದರ ನೀಡಬೇಕೆಂದು ಯಾವಾಗ ತೀರ್ಮಾನಕೈಗೊಳ್ಳಲಾಯಿತು?

ಇ) ಜಿಲ್ಲೆಯಲ್ಲಿ ರೈತರ ಐ.ಪಿ. ಸೆಟ್‌ಗಳಿಂದ ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಎಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಜಿಲ್ಲೆಯ ರೈತರು ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಕೆಯನ್ನು ಕೇಳಿರದಿದ್ದರೂ ಸಹ ಸರ್ಕಾರವೇ ಈ ಸೌಲಭ್ಯವನ್ನು ಇಲ್ಲಿಯವರೆಗೆ ನೀಡಿ ಈಗ ಏಕಾ ಏಕಿ ಇದಕ್ಕಾಗಿ ದರ ನಿಗಧಿಪಡಿಸಿದರೆ ಹಣ ಕಟ್ಟುವ ಇರುವ ರೈತರುಗಳ ಜಮೀನಿನಿಂದ ಐ.ಪಿ. ಸೆಟ್‌ಗಳನ್ನು ಕಿತ್ತುಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ವಿದ್ಯುತ್ ಮಂಡಳಿಯ ಈ ಕ್ರಮದಿಂದ ಬೆಳೆ ಬೆಳೆದಿರುವ ರೈತರು ಐ.ಪಿ. ಸೆಟ್‌ಗಳ ಮೂಲಕ ನೀರು ಐ.ಪಿ. ಸೆಟ್ಟುಗಳ ಮೂಲಕ ನೀರು ಸರಬರಾಜು ಮಾಡಲಾಗದೆ ತೊಂದರೆ ಅನುಭವಿಸುತ್ತಿದ್ದು, ಇವರ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳು ಯಾವುವು?